**ಓ.ಎಸ್.101/2019** **ಪಿ.ಡಬ್ಲೂಃ 6**

**ಸಾಕ್ಷಿಯನ್ನು ದಿಃ 10.10.2022 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀಸವಾಲು 2 ನೇ ಪ್ರತಿವಾದಿ ಪರ ಶ್ರೀ.ಎಂ.ಬಿ ವಕೀಲರಿಂದಃ**

ನಾನು ಬಿ.ಎ ವರೆಗೂ ವಿಧ್ಯಾಭ್ಯಾಸ ಮಾಡಿದ್ದೇನೆ. 1973 ರಲ್ಲಿ ನನ್ನ ವ್ಯಾಸಂಗ ಮುಗಿಯಿತು. ನಾನು ಮೈಸೂರಿನಲ್ಲಿ ವಾಸವಾಗಿದ್ದೆ ಎಂದರೆ ವ್ಯಾಸಂಗ ಮೈಸೂರಿನಲ್ಲಿ ಆದರೆ ವಾಸ ಯಲಚನಹಳ್ಳಿಯಲ್ಲಿ ಇದ್ದೆ ಎನ್ನುತ್ತಾರೆ. ನನ್ನ ವೃತ್ತಿ ವ್ಯವಸಾಯ. ನನಗೆ 5 ಎಕರೆ ಖುಷ್ಕಿ ಜಮೀನು ಇದೆ. ಸದರಿ ಜಮೀನು ನನಗೆ ದರಖಾಸ್ತು ಮೂಲಕ ಬಂದಿತ್ತು. ಸದರಿ ದರಖಾಸ್ತು ನನ್ನೊಬ್ಬ ಹೆಸರಿಗೆ ಆಗಿದೆ. ವಾದಿಗಳು ಈ ದಾವೆಯನ್ನು 5 ಐಟಂ ಸ್ವತ್ತುಗಳಿಗೆ ಹಾಕಿದ್ದಾರೆ. ವಾದಿಗಳು ಈ ದಾವೆಯಲ್ಲಿ ಸರ್ವೆ ನಂ. 14/2 ರಲ್ಲಿ 20 ಗುಂಟೆ , ಸರ್ವೆ ನಂ. 14/8 ರಲ್ಲಿ 38 ಗುಂಟೆ, ಸರ್ವೆ ನಂ, 14/3 ರಲ್ಲಿ 1 ಎಕರೆ 6 ಗುಂಟೆ, ಸರ್ವೆ ನಂ. 14/4 ರಲ್ಲಿ 3 ಎಕರೆ 33 ಗುಂಟೆ, ಸರ್ವೆ ನಂ. 18 ರಲ್ಲಿ 3 ಎಕರೆ 11 ಗುಂಟೆ ಮತ್ತು ಜೋಂಪನಹಳ್ಳಿಯ ಸರ್ವೆ ನಂ. 23/102 ರಲ್ಲಿ 3 ಎಕರೆ 6 ಗುಂಟೆಗೆ ಸಂಬಂಧಪಟ್ಟಂತೆ ಹೂಡಿದ್ದಾರೆ. ಜೋಂಪನಹಳ್ಳಿಯಲ್ಲಿ ಇರುವ ಸ್ವತ್ತಿನ ಸರ್ವೆ ನಂ. 21/102 ಆಗಿದೆ, ಅದು 23/102 ಅಲ್ಲ ಎಂದರೆ ಸರಿಯಲ್ಲ. ದಾವಾ 3 ಐಟಂ ಸ್ವತ್ತುಗಳು ವಾದಿಗಳಿಗೆ ಪಿತ್ರಾರ್ಜಿತ ಸ್ವತ್ತುಗಳಾಗಿವೆ. ಜೋಂಪನಹಳ್ಳಿಯ ಸ್ವತ್ತು ವಾದಿಗಳು ಮತ್ತು ಪ್ರತಿವಾದಿಗಳು ಜಂಟಿ ಕುಟುಂಬದಲ್ಲಿದ್ದಾಗ ಸರ್ಕಾರದಿಂದ ಮಂಜೂರಾಗಿರುವ ಸ್ವತ್ತಾಗಿದೆ ಎನ್ನುತ್ತಾರೆ. ದಾವಾ ಐಟಂ 3 ಮತ್ತು 4 ರ ಸ್ವತ್ತುಗಳು ಚಿಕ್ಕಬೈರಯ್ಯನವರ ಮಗ ಲೇಟ್ ಸಿದ್ದಯ್ಯನವರಿಗೆ ಸರ್ವೆ ನಂ. 14/4 ರಲ್ಲಿ 3 ಎಕರೆ 33 ಗುಂಟೆ, ಸರ್ವೆ ನಂ. 18 ರಲ್ಲಿ, 3 ಎಕರೆ 11 ಗುಂಟೆ ಜಮೀನು ಸರ್ಕಾರದಿಂದ ದರಖಾಸ್ತು ಮೂಲಕ ಮಂಜೂರಾಗಿರುತ್ತದೆ.

ಸಿದ್ದಯ್ಯನವರು ತಮ್ಮ ಜೀವತಾ ಕಾಲದಲ್ಲಿ ದಾವಾ ಐಟಂ 3 ಮತ್ತು 4 ರ ಸ್ವತ್ತುಗಳಿಗೆ ಸಂಬಂದಪಟ್ಟಂತೆ ಏನೇನು ವ್ಯವಹಾರ ಮಾಡಿದ್ದಾರೆ ಎಂದರೆ ಅವರು ಈ ಎರಡೂ ಐಟಂ ಸ್ವತ್ತುಗಳನ್ನು ಅವರ ತಮ್ಮನಾದ ದೊಡ್ಡಸಿದ್ದಯ್ಯನವರಿಗೆ ಕ್ರಯ ಮಾಡಿದ್ದು, ಪುನಃ ಅದನ್ನು ತಮ್ಮ ಸ್ವಾಧೀನಕ್ಕೆ ವಾಪಸ್ಸು ಪಡೆದಿರುತ್ತಾರೆ. ಸದರಿ ಸ್ವತ್ತುಗಳನ್ನು ತಮ್ಮ ಸ್ವಾಧೀನಕ್ಕೆ ಯಾವ ವರ್ಷದಲ್ಲಿ ಯಾವ ದಿನಾಂಕ, ಮತ್ತು ತಿಂಗಳಿನಲ್ಲಿ ಪಡೆದಿದ್ದರು ಎಂದರೆ ನನಗೆ ನಿಖರ ದಿನಾಂಕ ಗೊತ್ತಿಲ್ಲ. ಪಿ.ಟಿ.ಸಿ.ಎಲ್ ಕಾಯಿದೆ ಮೂಲಕ ಪುನಃ ತಮ್ಮ ಸ್ವಾಧೀನಕ್ಕೆ ಪಡೆದಿರುತ್ತಾರೆ. ಪುಟ್ಟಗೌರಮ್ಮ ಮತ್ತು ಪ್ರತಿವಾದಿಗಳು ದೊಡ್ಡಸಿದ್ದಯ್ಯ, ಕುಳ್ಳಬೋರಯ್ಯ ಮತ್ತು ಕ್ರಯದಾರರಾದ ಟಿ. ವಿವೇಕಾನಂದ ಇವರ ವಿರುದ್ಧ ಅಸಲು ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವಾ ವಿಚಾರ ನನಗೂ ತಿಳಿದಿತ್ತು. ಆ ದಾವೆಯು ಪುಟ್ಟಗೌರಮ್ಮ ಮತ್ತು ಪ್ರತಿವಾದಿಗಳ ಪರವಾಗಿ ಆಗಿತ್ತು ಎಂದರೆ ವಾದಿಗಳಿಗೆ ತಿಳುವಳಿಕೆ ನೀಡದೆ ಸದರಿ ದಾವೆಯನ್ನು ಹೂಡಿದ್ದರು ಎನ್ನುತ್ತಾರೆ. ಸದರಿ ತೀರ್ಪು ಮತ್ತು ಡಿಕ್ರಿ ವಿರುದ್ಧ ದೊಡ್ಡಸಿದ್ದಯ್ಯ ಮತ್ತು ಕುಳ್ಳಬೋರಯ್ಯ ಆರ್.ಎ ನಂ. 113/2008 ರಂತೆ 3 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿದ್ದರು ಎಂದರೆ ಸರಿ ಎಂದು ನುಡಿದು ವಾದಿಗಳಿಗೆ ತಿಳುವಳಿಕೆ ನೀಡದೆ ಅಪೀಲು ಮಾಡಿದ್ದರು ಎನ್ನುತ್ತಾರೆ.

**<u>ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.